ವರ್ಷಗಳೇ ಆಗಿ ಹೋಗಿತ್ತು. ಬ್ಯಾಂಕಾಕಿನಿಂದ ಬಂದು ಮೂರು ತಿಂಗಳ ನಂತರ ಕೊನೆಗೂ ಪುರುಸೊತ್ತು ಸಿಕ್ಕಿತು. ಈ ಬಾರಿ ಹೋದಾಗ ಹೀಗೇ ಸಹಜವಾಗಿ ಮೋಹನಕುಮಾರ ವಾಸವಾಗಿದ್ದ ಮನೆಯ ಓಣಿಯತ್ತ ಹೋದೆ. ಆತನಿದ್ದ ಹಳೆಯ ಮನೆ ಕೆಡವಿ ಅಲ್ಲೊಂದು ಹೊಸ ಕಟ್ಟಡ ನಿರ್ಮಾಣವಾಗಿತ್ತು. ಪೋಸ್ಟ್‌ಆಫೀಸಿನ ಸರೀ ಎದುರಿನ ಮನೆ ಅವನದಾಗಿತ್ತೆಂಬುದು ನನಗೆ ನೆನಪಿದ್ದರೂ ಈಗ ಈ ಹೊಸ ಕಟ್ಟಡವಿರುವ ಜಾಗದ ಮನೆಯೇ ಅವನದಾಗಿತ್ತೋ ಅಥವಾ ಅದರ ಪಕ್ಕದ್ದೋ ಎಂಬ ಸಂಶಯವಾಯಿತು. ನಂತರ ಆದಿನ ಸಂಜೆ ನನ್ನ ತಂದೆಯ ಮಿತ್ರರೂ ಆಗಿದ್ದ ನನಗೆ ಕಲಿಸಿದ್ದ ಶಿರಗೂರ ಮಾಸ್ತರ್ರು ಮನೆಗೆ ಬಂದಿದ್ದರು. ಚಹಾಪಾನದೊಟ್ಟಿನ ಹರಟೆಯ ನಡುವೆ ಕಾಕತಾಳೀಯವಾಗಿ ಮೋಹನಕುಮಾರನ ತಂದೆಯೂ ಶಿರಗೂರ ಮಾಸ್ತರೂ ಹಳೆಯ ಮಿತ್ರರೆಂಬುದು ತಿಳಿಯಿತು. 'ಹದಿನೈದು ವರ್ಷಗಳ ಹಿಂದೆ ಕಾರ್ ಅಪಘಾತವೊಂದರಲ್ಲಿ ಅವರು ಅವರ ಹೆಂಡತಿ ಹಾಗೂ ದೊಡ್ಡ ಮಗ ಮೋಹನಕುಮಾರ ಸ್ಥಳದಲ್ಲಿಯೇ ಮೃತಪಟ್ಟರು. ಅದೃಷ್ಟವೋ ದುರದೃಷ್ಟವೋ ಅವರ ಎರಡನೇ ಮಗ ಕಾರಲ್ಲಿ ಇರಲಿಲ್ಲವಾದ್ದರಿಂದ ಬದುಕಿಕೊಂಡ. ಆಮೇಲೆ ಯಾವುದೋ ಸಂಬಂಧಿಕರ ಮನೆಯಲ್ಲಿ ಆತ ಬೆಳೆದನೆಂಬುದು ಸುದ್ದಿ. ಈಗ ಎಲ್ಲಿದ್ದಾನೋ ಗೊತ್ತಿಲ್ಲ. ಇಡೀ ಕುಟುಂಬ ದೈವಲೀಲೆಗೆ ಹೇಗೆ ಬಲಿಯಾಗಿ ಹೋಯಿತು ನೋಡಿ, ಛೇ. ನನ್ನ ಒಳ್ಳೇ ಗೆಳೆಯರಾಗಿದ್ದರು ಅವರು. ನೆನೆಸಿಕೊಂಡರೆ ಈಗಲೂ ಕರಳು ಕಿವುಚುತ್ತದೆ' ಎಂದು ತುಂಬಾ ಬೇಸರದಿಂದ ಹೇಳಿದರು ಮಾಸ್ತರು.

ಅಂದಿನ ರಾತ್ರಿಯೂಟ ರುಚಿಸಲೇ ಇಲ್ಲ ನನಗೆ. ಮೋಹನಕುಮಾರನಿಗೆ ತಮ್ಮನೊಬ್ಬನಿದ್ದುದು ನೆನಪಾಯ್ತು. ನಮಗಿಂತ ಮೂರ್ನಾಲ್ಕು ವರ್ಷ ಚಿಕ್ಕವನಾಗಿದ್ದ ಅವನ ಜೊತೆ ನನ್ನ ಯಾವುದೇ ಸಂಪರ್ಕವಿರಲಿಲ್ಲ. ಮೋಹನಕುಮಾರನ ಮನೆಗೆ ಹೋದಾಗ ಅಲ್ಲೊಮ್ಮೆ ಇಲ್ಲೊಮ್ಮೆ ಮಾತನಾಡಿಸಿದ್ದಿರಬಹುದು ಅಷ್ಟೇ. ಶಿರಗೂರ ಮಾಸ್ತರೇನಾದರೂ ಅಣ್ಣ ತಮ್ಮನ ನಡುವೆ ಕನ್‌ಫ್ಯೂಷನ್ ಮಾಡಿಕೊಂಡರೇ? ಹಾಗಾಗಲು ಸಾಧ್ಯವಿಲ್ಲ, ಏಕೆಂದರೆ ಸತ್ತವನು ಮೋಹನಕುಮಾರನೇ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನನ್ನ ಪರಿಚಯವೇ ಇಲ್ಲದ ಆತನ ತಮ್ಮ ಅದು ಹೇಗೆ ಅಷ್ಟು ಸನಿಹ ಬರಲು ಸಾಧ್ಯ? ಫಸ್ಟ್ ಅಫ್ ಆಲ್, ಆತ ನನ್ನ ಗುರುತು ಹಿಡಿದಿದ್ದಾದರೂ ಹೇಗೆ, ಅಥವಾ ಈ ಮೋ ಎನ್ನುವ ವ್ಯಕ್ತಿ ಅಣ್ಣನೂ ಅಲ್ಲದೇ ತಮ್ಮನೂ ಅಲ್ಲದೇ ಯಾರೋ ಬೇರೆಯವನೇ ಆಗಿರಬಹುದೇ? ಹಾಗಾದರೆ... ಹಸಿದ ಹೊಟ್ಟೆಯಲ್ಲಿ ಹಾಸಿಗೆಯಲ್ಲಿ ಹೊರಳಾಡಿದೆ. ಇದಕ್ಕೆ ಉತ್ತರ ಮೋ–ವಿನ ವಿನಃ ಮತ್ಯಾರೂ ಕೊಡಲು ಸಾಧ್ಯವಿಲ್ಲ. ಆದರೆ ಆತನಲ್ಲಿ ಏನೆಂದು ಕೇಳುವುದು, ಹೇಗೆ ಕೇಳುವುದು?

ಊರಿಂದ ಹಿಂದಿರುಗಿದ ಮೇಲೆ ಮೋ–ನ ಫೋನ್ ಬಂದೀತೋ ಎಂದು ಒಂದೆರಡು ದಿನ ಕಾದೆ. ನಂತರ ನಾನೇ ಮಾಡಿದೆ. ಸದಾ ದೇಶ ವಿದೇಶಗಳ ಸುತ್ತಾಟದಲ್ಲೇ ಇರುವ ಆತನ ಫೋನು ತಕ್ಷಣಕ್ಕೆ ಸಿಗದಿರುವುದು ಸಹಜವೇ. ಆದರೆ ಎರಡು ವಾರದ ವರೆಗೂ ಸತತವಾಗಿ ಪ್ರಯತ್ನಿಸಿದರೂ ಆತನ ಫೋನ್ ಒಂದೇ ಬೀಪ್‌ಗೆ ತುಂಡರಿಸಲ್ಪಡುತ್ತಿತ್ತು. ನಾನು ಆತನೊಡನೆ ಮಾತನಾಡಲು ಕಾತರಿಸುತ್ತಿದ್ದೆ. ಹಿಂದೆ ಥಾಯ್ಲೆಂಡಿಗೆ ಹೋದಾಗ ಆತ ಕೊಟ್ಟ ವಿಸಿಟಿಂಗ್ ಕಾರ್ಡಿನಲ್ಲಿಯ ಆತನ ಆಫೀಸಿನ ನಂಬರಿಗೆ ಫೋನಾಯಿಸಿದೆ. ಫೋನು ಎರಡು ಮೂರು ಜನರಿಗೆ ವರ್ಗಾವಣೆಯಾಗಿ, ನಾನು ಯಾರು ಯಾತಕ್ಕಾಗಿ ಫೋನ್ ಮಾಡುತ್ತಿದ್ದೇನೆ ಎಂಬುದನ್ನೆಲ್ಲ ವಿಚಾರಿಸಿ ಕೊನೆಗೆ 'ಕೆಲದಿನಗಳ ಹಿಂದೆ ಆಫೀಸಿಗೆ ಬಂದಿದ್ದ ಮೋ ತುಂಬಾ ಡಿಸ್ಟರ್ಬ್ ಆಗಿದ್ದ. ಟ್ರಾಫಿಕ್ಕಿನಲ್ಲಿ ಸಿಕ್ಕಿಹಾಕಿಕೊಂಡಾಗ ಸುತ್ತಲೂ ಇರುವ ಗಾಡಿಗಳು ಕರ್ಕಶವಾಗಿ ಹಾರ್ನ್